# ಪ್ರಧಾನ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಮನಾಬಾದ.

ಪಿ.ಸಿ. ನಂ.34/2024
ಸಿ.ಡಬ್ಲ್ಯೂ-1

| | | |
|---|---|---|
| ಸಾಕ್ಷಿಯ ಹೆಸರು | - | ಡಾ.ರಾಹುಲ |
| ತಂದೆಯ ಹೆಸರು | - | ಚಂದ್ರಶೇಖರ ಪಾಟೀಲ. |
| ವಯಸ್ಸು | - | 35 ವರ್ಷ |
| ಉದ್ಯೋಗ | - | ವೈದ್ಯರು. |
| ವಾಸ | - | ಹುಮನಾಬಾದ. |

ದಿನಾಂಕಃ 26-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಪಿರ್ಯಾದಿ ಪರ ಶ್ರೀ.ಕೆ.ವಿ.ಪಿ. ವಕೀಲರಿಂದಃ</u>

ನನ್ನ ಸ್ವತ್ತಿನ ಟಿಎಂಸಿ ಸಂ.16/229 ಇರುತ್ತದೆ. ಸದರಿ ಸ್ವತ್ತನ್ನು ನಾನು ಆಸ್ಪತ್ರೆ & ಮನೆ ಕಟ್ಟಿಸಲು 2021 ನೇ ಸಾಲಿನಲ್ಲಿ ಖರೀದಿ ಮಾಡಿರುತ್ತೇನೆ. ಸಪ್ಟಂಬರ್ 2021 ರಲ್ಲಿ ನನ್ನ ಹೆಸರಿನಲ್ಲಿ ಮುಟೇಶನ ಮಾಡಿಸಿಕೊಂಡಿರುತ್ತೇನೆ. ಮತ್ತು 2022 ರಲ್ಲಿ ಕಟ್ಟಡ ಕಟ್ಟಲು ಪರವಾನಿಗೆ ಕೋರಿ ಪುರಸಭೆ ಹುಮನಾಬಾದಗೆ ಅರ್ಜಿ ಸಲ್ಲಿಸಿರುತ್ತೇನೆ. ಮೇ-2023 ರಲ್ಲಿ ಸದರಿ ಟಿಎಂಸಿ ರವರು ನನಗೆ ಕಟ್ಟಡ ಕಟ್ಟಲು ಪರವಾನಿಗೆ ನೀಡಿರುತ್ತಾರೆ. ಗುಲಬರ್ಗಾದಲ್ಲಿರುವ ಸಂದೀಪ ಪಾಟೀಲ ರವರ ಬಂದು ವೀಕ್ಷಣೆ ಮಾಡಿ ನಕಾಶೆ ಕೊಟ್ಟ ಮೇರೆಗೆ ನಾನು ರೂ.5,09,000.00 ಹಣವನ್ನು ಖರ್ಚು ಮಾಡಿ ಸದರಿ ಸ್ವತ್ತಿಗೆ ನಾನು ಕಮಾನ(ಆರ್ಚ) ಕಟ್ಟಿದ್ದೇನು. ನವ್ಹಂಬರ್-2023 ರಲ್ಲಿ ಆರ್ಚನ್ನು ಸಂಪೂರ್ಣವಾಗಿ ಕಟ್ಟಿದ್ದೇನು.

ದಿ.24.01.2024 ರಂದು ನನಗೆ ಹುಮನಾಬಾದ ಸಿ.ಇ.ಓ. ರವರಾದ ಬಾಬಾ ರವರು ಕಟ್ಟಡ ಕಟ್ಟಿದ ಆರ್ಚನ್ನು 24 ತಾಸಿನ ಒಳಗೆ ಕೆಡಿವಿಕೊಳ್ಳಬೇಕೆಂದು ರವರು ನೋಟಿಸ್ ನೀಡಿದರು. ನೀವು ಕೆಡಿವಿಕೊಳ್ಳದಿದ್ದರೆ 24 ತಾಸುಗಳ ನಂತರ ನಾವುಗಳು ಬಂದು ಕೆಡುವುತ್ತೇವೆ ಎಂದು ಸದರಿ ನೋಟಿಸಿನಲ್ಲಿ ನಮೂದು ಮಾಡಿದ್ದರು. ನಾನು ದಿ.25.01.2024 ರಂದು ನನ್ನ ಏನು ತಪ್ಪಾಗಿದೆ ಹೇಳಿ ಎಂದು ಸದರಿ ನೋಟಿಸಿಗೆ ಉತ್ತರ ಬರೆದಿರುತ್ತೇನೆ. ಅಥವಾ ಆರ್ಚನ್ನು ಕೆಡಲು ಕೋರ್ಟ ಆದೇಶ ಅಥವಾ ಜಿಲ್ಲಾಧಿಕಾರಿಗಳ ಆದೇಶ ಇದೆಯಾ ತೋರಿಸಿ ಎಂದು ಪತ್ರ ಬರೆದಿರುತ್ತೇನೆ ಸದರಿ ಪತ್ರಕ್ಕೆ ಟಿಎಂಸಿ ರವರು ಯಾವುದೇ ಉತ್ತರ ನೀಡಿರುವುದಿಲ್ಲ.

ದಿ.29.01.2024 ರಂದು ರಾತ್ರಿ ನಾನು ಹೈದ್ರಾಬಾದಿಗೆ ಹೋಗಿದ್ದೇನು. ದಿ.30.01.2024 ರಂದು ಬೆಳಿಗ್ಗೆ 5.30 ಗಂಟೆಗೆ ಮಹೇಶ ಮತ್ತು ರಾಜದೀಪ ಪಾಟೀಲ ರವರು ನನಗೆ ಕರೆ ಮಾಡಿ ಪುರಸಭೆ ಸಿ.ಇ.ಓ.ರವರಾ ಬಾಬಾ ವಸಮುದ್ದಿನ ಹುಮನಾಬಾದ ರವರು 2 ಜೆಸಿಬಿ, 3 ಪೋಲಿಸರ ವ್ಯಾನಗಳೊಂದಿಗೆ ಬಂದು ನೀವು ಕಟ್ಟಿರುವ ಆರ್ಚನ್ನು ಕೆಡವಿರುತ್ತಾರೆ ಎಂದು ಪೋನ ಮಾಡಿ ತಿಳಿಸಿರುತ್ತಾರೆ. ತಕ್ಷಣ ನಾನು ನಮ್ಮ ದೊಡ್ಡಪ್ಪವರಾದ ವಿ.ಕೆ.ಪಿ. ವಕೀಲರಿಗೆ ಪೋನ ಮಾಡಿ ಸದರಿ ವಿಷಯವನ್ನು ತಿಳಿಸಿದೇನು. ನಂತರ ಸದರಿಯವರು ನಾನು ಅಲ್ಲಿಗೆ ಹೋಗಿ ನೋಡುತ್ತೇನೆ ಎಂದು ತಿಳಿಸಿದರು. ನಂತರ ನನ್ನ ದೊಡ್ಡಪ್ಪನಾದ ವಿಕೆಪಿ ವಕೀಲರು ಪುರಸಭೆ ಸಿ.ಇ.ಓ.ರವರಾ ವಸಮುದ್ದಿನ ಬಾಬಾ ಹುಮನಾಬಾದ ರವರಿಗೆ ನಿಮ್ಮಲ್ಲಿ ಆರ್ಚ ಕೆಡುವಲು ಕೋರ್ಟ ಆದೇಶ ಅಥವಾ ಜಿಲ್ಲಾಧಿಕಾರಿಗಳ ಆದೇಶ ಇದೆಯಾ ಎಂದು ತೋರಿಸಿ ಎಂದು ಕೇಳಿದರು. ಆಗ ಸದರಿ ಸಿಇಓ ರವರು ನಮ್ಮ ದೊಡ್ಡಪ್ಪನವರಿಗೆ ವಾಟ್ಸಾಪ ಕಾಪಿ ಇದೆ ಎಂದು ತಿಳಿಸಿದರು. ಆದೇಶ ಇದ್ದರೆ ನೀವು

ಒಡೆಯಬಹುದು ಒಂದು ವೇಳೆ ಆದೇಶ ಇಲ್ಲದಿದ್ದರೆ ನಿಮ್ಮ ಮೇಲೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ ಎಂದು ತಿಳಿಸಿ ವಾಪಾಸ ಮನೆಗೆ ಹೋದರು.

ನಂತರ ಪುರಸಭೆ ಸಿ.ಇ.ಓ.ರವರಾ ವಸಮುದ್ದಿನ ಬಾಬಾ ಹುಮನಾಬಾದ ರವರನ್ನು ಚಿಟಗುಪ್ಪಾ ಪುರಸಭೆಗೆ ವರ್ಗಾವಣೆ ಮಾಡಿದರು. ನನ್ನ ಆರ್ಚನ್ನು ಕೆಡವಲು ಉದ್ದೇಶಕ್ಕಾಗಿ ವಸಮುದ್ದಿನ ಬಾಬಾ ರವರನ್ನು ಹುಮನಾಬಾದ ಟಿ.ಎಂ.ಸಿ.ಗೆ ವರ್ಗಾವಣೆ ಮಾಡಿದ್ದರು. ನಂತರ ಇದರ ವಿಷಯ ಕುರಿತು ಎಸ್.ಪಿ. ಬೀದರ, ನಿರ್ದೇಶಕರು, ಮುನ್ಸಿಪಲ ಆಡಳಿತಾತ್ಮಕ ಬೆಂಗಳೂರು ರವರಿಗೂ ಪತ್ರ ಬರೆದು ನನ್ನ ಆರ್ಚನ್ನು ಇಲ್‌ಲಿಗಲ್ ಆಗಿ ಕೆಡವಿದ ವಸಮುದ್ದಿನ ಬಾಬಾ ರವರಿಗೆ ಯಾವುದಾದರೂ ಕಾನೂನು ಕ್ರಮ ತೆಗೆದುಕೊಂಡಿದ್ದಿರಾ ಎಂದು ಅರ್ಜಿಯನ್ನು ಬರೆದಿರುತ್ತೇನೆ ಸದರಿಯವರು ವಸಮುದ್ದಿನ ಬಾಬಾ ರವರ ವಿರುದ್ಧ ಕಾನೂನು ಕ್ರಮ ತೆಗೆದುಕೊಂಡಿಲ್ಲ

ಆದ್ದರಿಂದ ನಾನು ನನ್ನ ಆರ್ಚನ್ನು ಕೆಡವಿದ ವಸಮುದ್ದಿನ ಬಾಬ ರವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಖಾಸಗಿ ದೂರನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ಕಟ್ಟಡ ಪರವಾನಿಗೆಯನ್ನು ನಿಪಿ.1 ಎಂದು ಗುರುತಿಸಲಾಯಿತು.

ಸಾಕ್ಷಿಯು ದಿ.24.01.2024 ರಂದು ಮುಖ್ಯಾಧಿಕಾರಿಗಳು, ಪುರಸಭೆ ಹುಮನಾಬಾ ರವರು ನನಗೆ ನೀಡಿದ ನೋಟಿಸಿನ ಪ್ರತಿಯನ್ನು ನಿಪಿ.2 ಎಂದು ಗುರುತಿಸಲಾಯಿತು.

ಸಾಕ್ಷಿಯು ನಿರ್ದೇಶಕರು, ಮುನ್ಸಿಪಲ ಆಡಳಿತಾತ್ಮಕ ಬೆಂಗಳೂರು ರವರಿಗೆ ನೀಡಿರುವ ಅರ್ಜಿಯ ಪ್ರತಿಯನ್ನು ನಿಪಿ.3 ಎಂದು ಗುರುತಿಸಲಾಯಿತು.

ಸಾಕ್ಷಿಯು ಎಸ್.ಪಿ. ಬೀದರ ರವರಿಗೆ ನೀಡಿದ ದೂರಿನ ಪ್ರತಿಯನ್ನು ನಿಪಿ.4 ಎಂದು ಗುರುತಿಸಲಾಯಿತು.

ಸಾಕ್ಷಿಯು 2 ಅಂಚೆಯ ರಶೀದಿಗಳನ್ನು ನಿಪಿ.5 & 6 ಎಂದು ಗುರುತಿಸಲಾಯಿತು.

ಸಾಕ್ಷಿಯು ಅಂಚೆ ಸ್ವೀಕೃತಿಯನ್ನು ನಿಪಿ.7 ಎಂದು ಗುರುತಿಸಲಾಯಿತು.

ಸಾಕ್ಷಿಯು 12 ಭಾವಚಿತ್ರಗಳು & 1 ಸಿ.ಡಿ.ಯನ್ನು ನಿಪಿ.8 ರಿಂದ 19 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಅರ್ಜಿದಾರರ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ.ಸ.ಅ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ,
ನ್ಯಾಯಿಕ ದಂಡಾಧಿಕಾರಿಗಳು, ಹುಮನಾಬಾದ.